**ಯುವಕ:** ನಿನಗಿಂತ ಸುಂದರ ಹುಡುಗಿಯನ್ನು ಇದುವರೆಗೂ ನೋಡಿಯೇ ಇಲ್ಲ.
**ಯುವತಿ:** ಥ್ಯಾಂಕ್ಸ್, ಇದಕ್ಕೆ ಏನು ಹೇಳಬೇಕು ಅಂತ ಗೊತ್ತಾಗ್ತಿಲ್ಲ.
**ಯುವಕ:** ನನ್ನ ಹಾಗೆ ನೀನು ಏನೋ ಒಂದು ಹೇಳಿದರಾಯ್ತು.

**ಪತಿ:** (ವಾಟ್ಸ್‌ಆ್ಯಪ್‌ನಲ್ಲಿ) ಆಫೀಸ್‌ನಲ್ಲಿ ಇದ್ದರೂ ಬಾನಲ್ಲಿ ಹಾರಾಡುವ ಆಸೆಯಾಗ್ತಿದೆ ಕಣೆ.
**ಪತ್ನಿ:** ಹೌದಾ, ಹಾರಾಡಿ ಭೂಮಿಗಿಳಿದ ಮೇಲೆ ಸಾಸಿವೆ ತರೋದು ಮರಿಬೇಡಿ.

**ನಾಗೇಶ:** ಕೃಷ್ಣ, ಆ ಟೀಚರ್ ನನ್ನನ್ನು ಮುಂದಿನ ಜನ್ಮದಲ್ಲಿ ಕತ್ತೆಯಾಗಿ ಹುಟ್ಟು ಅಂತ ಬೈದ್ರು ಕಣೊ.
**ಕೃಷ್ಣ:** ಹೆದರಬೇಡ ನಾಗೇಶ ಒಂದೇ ಜನ್ಮ ಮತ್ತೆ ಮರಳಿ ಬರುವುದಿಲ್ಲ.




**ರೋಗಿ:** ಸಾರ್ ನನಗೆ ಉಬ್ಬಸವಿದೆ. ಇದರಿಂದ ರಾತ್ರಿ ಉಸಿರಾಡಲು ಆಗ್ತಿಲ್ಲ.
**ಡಾಕ್ಟರ್:** ಈ ಎರಡು ಮಾತ್ರೆ ತೆಗೆದುಕೊಳ್ಳಿ, ಒಂದು ರಾತ್ರಿ ಮಲಗುವಾಗ ನುಂಗಿ, ಬೆಳಿಗ್ಗೆ ನೀವೇನಾದರೂ ಎದ್ದರೆ ಇನ್ನೊಂದು ನುಂಗಿ.

**ಶಿಕ್ಷಕ:** ರಂಗ, ಕಿಟ್ಟಿಗೆ ಯಾಕೆ ಹೊಡೆದೆ?
**ರಂಗ:** ಅವನು ಕಳೆದ ವಾರ ಇಂಗ್ಲಿಷ್‌ನಲ್ಲಿ ಬೈದಿದ್ದ ಸಾರ್.
**ಶಿಕ್ಷಕ:** ಆಯ್ತು. ಅದಕ್ಕೆ ಈಗ ಏಕೆ ಹೊಡದೆ?
**ರಂಗ:** ಅದರ ಅರ್ಥ ನಿನ್ನೆ ಗೊತ್ತಾಯ್ತು.

**ರಾಜು:** ಗಿರಿ, ಕಳ್ಳನಿಗೂ ಸಚಿವರಿಗೂ ಇರುವ ವ್ಯತ್ಯಾಸ ಗೊತ್ತಾ?
**ಗಿರಿ:** ಗೊತ್ತು. ಕಳ್ಳನ ಹಿಂದೆ ಪೊಲೀಸ್ ಇದ್ದರೆ, ಸಚಿವರ ಮುಂದೆ ಪೊಲೀಸ್ ಇರುತ್ತಾರೆ ಅಷ್ಟೆ.

**ಆತ:** ನಾನು ಕುಡಿದಾಗೆಲ್ಲ ಹೆಂಡ್ತಿ ಬೈತಾ ಇದ್ದಳು. ಅದಕ್ಕೆ ನಿಜವಾಗಲೂ ಬಿಟ್ಟುಬಿಟ್ಟೆ.
**ಈತ:** ಅಂತೂ ಕುಡಿಯುವುದನ್ನು ಬಿಟ್ಟಲ್ಲ. ಅದೇ ಸಂತೋಷ.
**ಆತ:** ನಾನು ಬಿಟ್ಟಿದ್ದು ಹೆಂಡತಿಯನ್ನ, ಕುಡಿತವನ್ನಲ್ಲ.

ಸಂಗ್ರಹ: ಶಂಕರೇಗೌಡ ತುಂಬಕೆರೆ, ಮಂಡ್ಯ


---

**ಹೆಂಡತಿ:** ರಾತ್ರಿ ನನ್ನ ಉದ್ದ ಕೂದಲು ಕಂಡು ಕೇಶರಾಣಿ, ನಾಗವೇಣಿ ಎಂದೆಲ್ಲಾ ಹೊಗಳುತ್ತೀರಿ...
**ಗಂಡ:** ಹೌದು ಏನೀಗ?
**ಹೆಂಡತಿ:** ಅದೇ ಕೂದಲು ಊಟದಲ್ಲಿ ಸಿಕ್ಕರೆ, 'ಥೂ ದರಿದ್ರ ಕೂದಲು' ಅಂತ ಸಿಡಿಮಿಡಿಗೊಳ್ಳುತ್ತೀರಿ.
**ಗಂಡ:** ಸಿನಿಮಾ ನೋಡುವುದಕ್ಕೂ ಜೀವನ ನಡೆಸೋದಕ್ಕೂ ವ್ಯತ್ಯಾಸ ಇರೋದಿಲ್ಲವೇನು?




ಹೋಟೆಲ್‌ನಲ್ಲಿ ಗ್ರಾಹಕನಿಗೆ ಮಾಣಿ ಚಹಾ ತರುವಾಗ ಕಪ್‌ನಲ್ಲಿ ಬೆರಳು ಇಟ್ಟುಕೊಂಡೇ ಬಂದಿದ್ದ.
**ಗ್ರಾಹಕ:** (ಸಿಟ್ಟಿನಿಂದ) ಏನೋ ಕಪ್‌ನಲ್ಲಿ ಬೆರಳು ಇಟ್ಟುಕೊಂಡು ಬಂದಿದ್ದೆಯಲ್ಲ.
**ಮಾಣಿ:** (ಸಮಾಧಾನದಿಂದ) ಹೌದು ಸರ್ ಕೈಗೆ ಗಾಯವಾಗಿತ್ತು, ಡಾಕ್ಟರ್ ಯಾವಾಗಲೂ ಬೆಚ್ಚಗೆ ಇಡಬೇಕು ಅಂತ ಹೇಳಿದ್ರು.
**ಗ್ರಾಹಕ:** (ಇನ್ನಷ್ಟು ಸಿಟ್ಟಿನಿಂದ) ಬಾಯೊಳಗೆ ಇಟ್ಟುಕೊಳ್ಳಬೇಕಾಗಿತ್ತು.
**ಮಾಣಿ:** (ಇನ್ನಷ್ಟು ಸಮಾಧಾನದಿಂದ) ಇಷ್ಟೊತ್ತು ಬಾಯೊಳಗೆ ಇತ್ತು, ಈಗ ಕಪ್‌ನಲ್ಲಿ ಇಟ್ಟುಕೊಂಡು ಬಂದೆ.

**ಹೆಂಡತಿ:** ಮದುವೆಯಾಗುವ ಮುಂಚೆ, ಬರ್ತ್‌ಡೇಗೆ, ದೀಪಾವಳಿ ಹಬ್ಬಕ್ಕೆ ಹೊಸ ಡ್ರೆಸ್, ಸೀರೆ, ವಾಚ್ ಹೀಗೆ ಏನೆಲ್ಲಾ ಗಿಫ್ಟ್ ಕೊಡ್ತಿದ್ರಿ.
**ಗಂಡ:** ಹೌದು, ಕೊಡ್ತಿದ್ದೆ.
**ಹೆಂಡತಿ:** ಮತ್ತೆ ಈಗ್ಯಾಕೆ ಏನೂ ತಂದು ಕೊಡ್ತಿಲ್ಲ?
**ಗಂಡ:** ಹುಚ್ಚಿ, ಎಲೆಕ್ಷನ್ ಇದ್ದಾಗ ಮಾತ್ರ ಪ್ರಚಾರ ಮಾಡೋದು, ಎಲೆಕ್ಷನ್ ಆದ ಮೇಲೆ ಪ್ರಚಾರ ಇರುತ್ತಾ?




**ಪತಿ:** ನಿನ್ನ ಬದಲು ರಾಕ್ಷಸಿಯನ್ನಾದರೂ ಮದುವೆಯಾಗಿದ್ದಿದ್ದರೆ ಆರಾಮಾಗಿ ಇರುತ್ತಿದ್ದೆ.
**ಪತ್ನಿ:** ನಿಮಗೆ ವಿಷಯ ಗೊತ್ತಿಲ್ಲವೇ?
**ಪತಿ:** ಏನ್ ವಿಷಯ?
**ಪತ್ನಿ:** ರಕ್ತಸಂಬಂಧಿಗಳ ಜೊತೆಗೆ ಮದುವೆಯಾಗಬಾರದಂತ.

ಸಂಗ್ರಹ: ಸಿ.ಕೆ. ಗಣಪ್ಪನವರ, ಮುಂಡರಗಿ